**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ**

**ಸಿ.ಸಿ ನಂ:1291/2015**

ಪಿಡಬ್ಲ್ಯೂ: 4　　　　ಸಿಡಬ್ಲ್ಯೂ: 4

ಸಾಕ್ಷಿಯನ್ನು ತಾ:-**09.03.2022** ರಂದು ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಟಿ.ಸಿ ಚನ್ನೇಗೌಡ |
| ತಂದೆಯ ಹೆಸರು | ಚಿಕ್ಕಣ್ಣ |
| ವಯಸ್ಸು | 54 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ತಳಗವಾದಿ ಗ್ರಾಮ. |

**ಮುಖ್ಯ ವಿಚಾರಣೆ: ಶ್ರೀ ಸ.ಸ.ಅ ರವರಿಂದ**

1. ಚಾಸಾ-5 ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯು ಅಮಾನತು ಮಹಜರ್ ಆಗಿದ್ದು ಅದನ್ನು ಸಾಕ್ಷಿ ಗುರುತಿಸಿದ ಕಾರಣ ನಿ.ಪಿ-3 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ನಾನು ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ-3 ಕ್ಕೆ ನಾನು ಸಹಿ ಮಾಡುವಾಗ ಬೇರೆ ಯಾರು ಇರಲಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷ್ಷಿಯು ಅಮಾನತ್ ಮಹಜರ್ ಹೇಳಿಕೆದಾರರಾಗಿದ್ದು ತನ್ನ ಅಮಾನತ್ ಮಹಜರ್ ಮತ್ತು ತನ್ನ ಹೇಳಿಕೆಗೆ ವಿರುದ್ದ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲು: ಶ್ರೀ ಸ.ಸ.ಅ ರವರಿಂದ:**

2. ದಿನಾಂಕ 06-09-2015 ರಂದು ನಾನು ಸ್ವಂತ ಕೆಲಸದ ನಿಮಿತ್ತ ಮಳವಳ್ಳಿ ಟೌನ್ ಗೆ ಬಂದಿರುತ್ತೇನೆ ಎಂದರೆ ಸರಿ. ಆ ದಿನ ಗ್ರಾಮಾಂತರ ಠಾಣೆಯ ಪಿ.ಎಸ್.ಐ ರವರು ನನಗೆ ಮಹಜರ್ ಕ್ರಮ ಜರುಗಿಸಲು ಸಹಕರಿಸಿ ಸಹಿ ಮಾಡಲು ಕೇಳಿಕೊಂಡಿರುತ್ತಾರೆ ಎಂದರೆ ಸರಿ. ನಾನು ನಿ.ಪಿ-3 ಕ್ಕೆ ಸಹಿ

ಮಾಡಲು ಠಾಣೆಗೆ ಹೋದಾಗ ಆರೋಪಿಗಳು ಅಲ್ಲಿ ಹಾಜರಿದ್ದರು ಸಾಕ್ಷಿಯು ನಾನು ಅವರನ್ನು ನೋಡಲಿಲ್ಲ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಪೊಲೀಸರು ಆರೋಪಿಗಳಿಂದ ಒಂದು ಬಜಾಜ್ ಸ್ಕೂಟರ್ ನಂ. ಕೆ.ಎ-02-ಇಎ-6942 ಮತ್ತು ಒಂದು ಕಬ್ಬಿಣದ ರಾಡನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-3 ಕ್ಕೆ ಚಾಸಾ-5 ರವರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲ ಸಂಗತಿಗಳು ಗೊತ್ತಿದ್ದರು ಆರೋಪಿಗಳಿಗೆ ಸಹಿ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ದಿನಾಂಕ 06-09-2015 ರಂದು –------------------------------------ ------------------------------ ನಾನು ಈ ಮೇಲೆ ವಿವರವಾಗಿ ಓದಿ ಹೇಳಿದ ಪ್ರಕಾರ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಕರಿಸಿದ ಕಾರಣ ಸದರಿ ಹೇಳಿಕೆಯನ್ನು ನಿ.ಪಿ-4 ಎಂದು ಗುರುತಿಸಲಾಯಿತು.

4. ನಾನು ಆರೋಪಿಗೆಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ಮತ್ತು 3 ನೇ ಆರೋಪಿ ಪರ ವಕೀಲರಿಂದಃ**

5. ಪೊಲೀಸರು ನನಗೆ ಯಾವ ವಿಚಾರಕ್ಕೆ ಸಂಬಂಧಪಟ್ಟಂತೆ ಮಹಜರ್ ಜರುಗಿಸಲು ಕರೆದಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ನಿ.ಪಿ-3 ರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

**ಆರೋಪಿ 1 ರವರ ಪರ ವಕೀಲರು ಆರೋಪಿ 2 ಮತ್ತು 3 ರವರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ: ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ